ಶ್ರೀ ಬಿ. ರಾಚಯ್ಯ:—ಕೃಷಿ ಉದ್ಯಮ ಸಂಸ್ಥೆಯವರು ಹೊಸ ಯಂತ್ರಗಳನ್ನು ಕೊಂಡುಕೊಳ್ಳುತ್ತಿದ್ದಾರೆ. ಅದನ್ನು ರೈತರಿಗೆ ಬಾಡಿಗೆ ಆಧಾರದ ಮೇಲೆ ಕೊಡುತ್ತಿದ್ದಾರೆ. ಇದರಿಂದ ಆ ಸಂಸ್ಥೆಗೆ ಸ್ವಲ್ಪ ಮಟ್ಟಿಗೆ ಲಾಭ ಬರುತ್ತಿದೆ. ನಾವು ಇದುವರೆಗೆ ಏನು ದರವನ್ನು ನಿಗದಿ ಮಾಡಿದ್ದೆವೋ ಅದೇ ದರವನ್ನು ಲೆಕ್ಕಕ್ಕೆ ತೆಗೆದುಕೊಂಡು ಸ್ವಲ್ಪ ಮಟ್ಟಿಗೆ ಹೆಚ್ಚಿಸಿದ್ದಾರೆ, ಇದರಿಂದ ರೈತರಿಗೆ ಏನೂ ಅನಾನುಕೂಲ ವಾಗುವುದಿಲ್ಲ. ಸರ್ವಿಸ್ ಕಂಡಿಷನ್ ಬಗ್ಗೆ ಹೇಳುವುದಾದರೆ ಹಿಂದೆ ವಿದ್ಯುಚ್ಛಕ್ತಿ ಬೋರ್ಡ್ ಮಾಡಿದಾಗ ಯಾವ ಕಂಡೀಷನನ್ನು ಬೋರ್ಡ್‌ಗೆ ಸರ್ಕಾರದವರು ಹಾಕಿದ್ದರೋ ಅದೇ ಕಂಡೀಷನನ್ನು ಇಲ್ಲಿಯೂ ಕೂಡ ಹಾಕಲಾಗಿದೆ. ಅದರ ಪ್ರಕಾರ ವ್ಯವಸಾಯ ಇಂಜಿನಿಯರಿಂಗ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದವರನ್ನು ಕೃಷಿ ಉದ್ಯಮ ಸಂಸ್ಥೆಯಲ್ಲಿಯೇ ಇರುತ್ತಾರೆ.

INCOME OF ANNUAL CATTLE SHOW AT CHICKNAYAKANAHALLI TOWN MUNICIPALITY

380. Sri C.K. RAJAIAH SHETTY (Chiknayakanahalli):—

Will the Minister of State for Municipal Administration be pleased to state.—

(*a*) whether they are aware that Chicknayakanahalli Town Municipality is conducting annua cattle show during Jatra time, if so, since how many years ;

(*b*) whether the Municipality is paying regularly 90 per cent of the net income as per rules to the Prasanna Rameshwara Swamy's temple, if not the arrears due ?

Sri B.M. PATIL.— (Minister of State for Municipal Administration).—

(*a*) Yes, since 1939.

(*b*) No. Arrears due is Rs. 6,967-20.

ಶ್ರೀ ಸಿ.ಕೆ. ರಾಜಯ್ಯಶೆಟ್ಟಿ.—ಇದು ಮುಜರಾಯಿ ದೇವಸ್ಥಾನವಾದ್ದರಿಂದ ಸರ್ಕಾರದ ಆಡಳಿತದಲ್ಲಿ ಇರಬೇಕಾಗುತ್ತದೆ. ಇಷ್ಟೊಂದು ಬಾಕಿ ಹಣವನ್ನು ಕೊಡದಿರುವುದಕ್ಕೆ ಕಾರಣ ಏನು ? ದೇವಸ್ಥಾನ ಬಿದ್ದು ಹೋಗುವ ಸ್ಥಿತಿಯಲ್ಲಿ ಇದೆ. ಇದಕ್ಕೆ ಯಾರು ಜವಾಬ್ದಾರರು ?

ಶ್ರೀ ಬಿ.ಎಂ. ಪಾಟೀಲ್.—ಈಗಿನ ಸರ್ಕಾರೀ ಆಜ್ಞೆ ಪ್ರಕಾರ ನಿವ್ವಳ ಆದಾಯದ ಶೇಕಡ ೮೦ ರಷ್ಟನ್ನು ನಗರ ಸಭೆಯವರು ಕೊಡಬೇಕೆಂದು ಇದೆ. ತಾವು ಕೂಡ ಆ ನಗರ ಸಭೆಯ ಅಧ್ಯಕ್ಷರಾಗಿದ್ದಾಗ ಬಾಕಿ ಇದ್ದ ಹಣವನ್ನು ಕೊಟ್ಟಿಲ್ಲ.

ಶ್ರೀ ಸಿ.ಕೆ. ರಾಜಯ್ಯಶೆಟ್ಟಿ.—ಆ ವಿಚಾರ ಬೇಡ. ೧೯೬೯ನೇ ಇಸವಿಯಿಂದ ಬಾಕಿ ನಿಂತಿರುವ ಹಣವನ್ನು ವಸೂಲಿ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಬಿ.ಎಂ. ಪಾಟೀಲ್.—ತಕ್ಕ ಕ್ರಮ ತೆಗೆದುಕೊಳ್ಳುವುದಕ್ಕೆ ಜಿಲ್ಲಾಧಿಕಾರಿಯವರಿಗೆ ಹೇಳಲಾಗಿದೆ.

ಶ್ರೀ ಅಜೀಜ್‌ಸೇಠ್.—ಶ್ರೀ ರಾಜಯ್ಯಶೆಟ್ಟರು ಅಧ್ಯಕ್ಷರಾಗಿದ್ದಾಗ ಬಾಕಿ ಹಣ ಕೊಡಲಿಲ್ಲ ಎಂದು ಹೇಳಿದಿರಿ. ಅವರು ಈಗ ಅಧಿಕಾರದಲ್ಲಿ ಇಲ್ಲ. ರೂಲ್ಸ್ ಪ್ರಕಾರ ವಸೂಲಿ ಮಾಡದೇ ಇದ್ದ ಅಧಿಕಾರಿಗಳ

(ಶ್ರೀ ಅಜೀಜ್ ಸೇಠ್)

ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ತೆಮ್ಮ ಅಧಿಕಾರಿಗಳು ಎಫಿಸಿಯೆಂಟ್ ಆಗಿ ಇದ್ದಾರೆ ಎಂದು ಹೇಳುವಾಗ ಅವರಿಗೆ ಈ ಸಂಬಂಧದಲ್ಲಿ ಕ್ರಮತೆಗೆದುಕೊಳ್ಳುವುದಕ್ಕೆ ಆಗಲಿಲ್ಲವೇ ?

ಶ್ರೀ ಬಿ.ಎಂ. ಪಾಟೀಲ್.—ಅದು ಮಾನ್ಯ ಸದಸ್ಯರ ಅಭಿಪ್ರಾಯ. ಈಗಾಗಲೇ ಜಿಲ್ಲಾಧಿಕಾರಿಯವರು ಅಸಿಸ್ಟೆಂಟ್ ಕಮೀಷನರ್ ಅವರಿಗೆ ಮತ್ತು ತಹಶೀಲ್ದಾರರಿಗೆ ಆದೇಶ ಕೊಟ್ಟಿದ್ದಾರೆ. ಅದರಂತೆ ಅವರು ಈ ಹಣವನ್ನು ಅಡ್ಜೆಸ್ಟ್ ಮಾಡುವುದಕ್ಕೆ ಕಾರ್ಯಕ್ರಮ ಕೈಗೊಂಡಿದ್ದಾರೆ.

ಶ್ರೀ ಸಿ ಕೆ. ರಾಜಯ್ಯಸೆಟ್ಟಿ.. ದೇವಸ್ಥಾನದ ಕಾಂಪೌಂಡ್ ಗೋಡೆ ಬಿದ್ದು ಹೋಗಿರುವುದರಿಂದ ಅಲ್ಲಿ ನಾಯಿ, ಕತ್ತೆ ಮುಂತಾದವು ಸೇರಿಕೊಂಡಿವೆ. ಈ ಸರ್ಕಾರಕ್ಕೆ ದೇವರಲ್ಲಿ ಭಕ್ತಿ ಇದೆಯೇ, ಈ ಒಂದು ದೃಶ್ಯವನ್ನು ನೋಡುವುದಕ್ಕೆ ಸರ್ಕಾರದವರಿಗೆ ಇಷ್ಟವೇ ?

Mr. SPEAKER —That question does not arise.

CONSTRUCTION OF A BRIDGE NEAR NANJANGUD

396. Sri D.M. SIDDAIAH (Biligere):—

Will the Minister for Public Works be pleased to state :—

(*a*) whether an estimate for the construction of the bridge over Kapini near Nanjangud has been prepared ;

(*b*) whether it has come to the notice of the Government that on account of the present bridge being narrow and running parallel to the Railway line, lot of inconvenience is caused to the vehicles while passing through the bridge ;

(*c*) whether the Minister for Public Works had this experience once when he visited Nanjangud ;

(*d*) whether it has come to the notice of the Government that the number of accidents that took place near this bridge are frequent ;

(*e*) whether the Government would take up this work and complete it in view of its importance even if no assistance is received from Centeral Government ?

Sri K. LAKKAPPA.— (Minister for Public Works).—

(*a*) Yes.

(*b*) Yes.

(*c*) Yes.

(*d*) One accident had occurred on this bridge during the previous year.